ಕಳಪೆ ಗುಣಮಟ್ಟದ ಹಾಲನ್ನು ಉತ್ಪಾದಿಸುತ್ತಿರುವುದು

1 (102); ಶ್ರೀ ಐಹೊಳೆ ಡಿ. (ರಾಯಭಾಗ)

ಅ) ರಾಜ್ಯದಲ್ಲಿರುವ ಖಾಸಗಿ ಡೈರಿ ಘಾರಂಗಳೆಷ್ಟು; ಅವುಗಳಾವುವು (ವಿವರ ನೀಡುವುದು):

ಆ) ಬೆಳಗಾವಿ ಜಿಲ್ಲೆಯಾದ್ಯಂತ ಖಾಸಗಿ ಡೈರಿ ಘಾರಂಗಳಿಂದ ಕಳಪೆ ಗುಣಮಟ್ಟದ ಹಾಲು ಪೂರೈಕೆ ಆಗುತ್ತಿರುವುದನ್ನು ಇತ್ತೀಚೆಗೆ ಖಾಸಗಿ ಮಾಧ್ಯಮಗಳಲ್ಲಿ ಪ್ರಸಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಕಳಪೆ ಗುಣಮಟ್ಟದ ಹಾಲನ್ನು ಉತ್ಪಾದಿಸಿ ಮಾರಾಟ ಮಾಡುತ್ತಿರುವ ಈ ಖಾಸಗಿ ಡೈರಿಗಳ ಮೇಲೆ ಸರ್ಕಾರ ಕಾನೂನಿನ ಕ್ರಮ ಕೈಗೊಳ್ಳುವುದೇ?

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) ಕರ್ನಾಟಕ ರಾಜ್ಯದಲ್ಲಿ 30 ಖಾಸಗಿ ಡೇರಿ ಘಾರಂಗಳಿದ್ದು, ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಬ್ರಾಂಡ್ ಹೆಸರು	ವಿಳಾಸ
1	ಆರೋಗ್ಯ	ಹ್ಯಾಟ್ಸನ್ ಅಗ್ರೋ ಪ್ರಾಡೆಕ್ಟ್, ಬೆಳಗಾವಿ ಹಾಗೂ ದಾವಣಗೆರೆ
2	ಮಿಲ್ಕಿವೇವ್	ಕುಣಿಗಲ್, ತುಮಕೂರು ಜಿಲ್ಲೆ
3	ಆದಿತ್ಯ ಮಿಲ್ಕ್	ಬೆಳಗಾವಿ
4	ಆನಂದ್	ಹುಬ್ಬಳ್ಳಿ, ಧಾರವಾಡ ಜಿಲ್ಲೆ.
5	ಕ್ಲಾಸಿಕ್ ಡೇರಿ	ಬೆಂಗಳೂರು
6	ದೊಡ್ಲಾ ಡೇರಿ	ಸಿಂಧನೂರು–ಕರ್ನಾಟಕ

7	ಡೇರಿ ಲೈಫ್	ರಿಲೆಯನ್ಸ್, ಬೊಮ್ಮಸಂದ್ರ
8	ದಾನಮ್ಮ	ಬಿಜಾಪುರ
9	ಗೋವಿಂದ	ಬೆಳಗಾವಿ
10	ಹೆರಿಟೇಜ್	ಆನೆಕಲ್–ಬೆಂಗಳೂರು
11	ಕೃಷ್ಣಾಮೃತ	ಬಿಜಾಪುರ
12	ಜರ್ಸಿ	ಮಳವಳ್ಳಿ–ಮಂಡ್ಯ ಜಿಲ್ಲೆ
13	ಕಾವೇರಿ	ಕುಣಿಗಲ್, ತುಮಕೂರು ಜಿಲ್ಲೆ
14	ಕೆನಿ	ಹುಬ್ಬಳ್ಳಿ, ಧಾರವಾಡ ಜಿಲ್ಲೆ.
15	ಲಕ್ಷ್ಮೀ	ಬಿಜಾಪುರ
16	ನ್ಯಾಚುರಲ್ ರಿಚ್	ಹುಬ್ಬಳ್ಳಿ ಧಾರವಾಡ ಜಿಲ್ಲೆ, ಬ್ರಹ್ಮಾವರ–ಉತ್ತರ ಕನ್ನಡ ಜಿಲ್ಲೆ
17	ಮುಕುಂದ	ಬೊಮ್ಮನಹಳ್ಳಿ–ಬೆಂಗಳೂರು
18	ಮಿಲ್ಕ್ ರೂಟ್	ಬೆಂಗಳೂರು
19	ಮಧುರ	ಕೃಷ್ಣಾ ಕಿರುವತ್ತಿ–ಉತ್ತರ ಕನ್ನಡ ಜಿಲ್ಲೆ
20	ನೀಲಗಿರೀಸ್ ಡಿಲೈಟ್ ಮಿಲ್ಕ್	ಬೊಮ್ಮಸಂದ್ರ–ಬೆಂಗಳೂರು
21	ನಿರ್ಮಲ್	ಮಂಡ್ಯ
22	ರಾಯಲ್	ಗುಲ್ಬರ್ಗಾ
23	ರಾಮ್ ರಹೀಂ	ಧಾರವಾಡ
24	ಶ್ರೀ ಕೃಷ್ಣ	ಆನೇಕಲ್–ಬೆಂಗಳೂರು, ಬ್ರಹ್ಮಾವರ–ಉತ್ತರ ಕನ್ನಡ ಜಿಲ್ಲೆ
25	ಸಾಯಿರಕ್ಷಾ	ಬೊಮ್ಮನಹಳ್ಳಿ, ಬೆಂಗಳೂರು
26	ಶಿವಂ	ಅಥಣಿ,–ಬೆಳಗಾವಿ ಜಿಲ್ಲೆ
27	ಸರಸ	ಬಿಜಾಪುರ
28	ಶೃತಿ	ತಿಪಟೂರು–ತುಮಕೂರು ಜಿಲ್ಲೆ

29	ಶಿವಶಕ್ತಿ	ತಿಪಟೂರು–ತುಮಕೂರು ಜಿಲ್ಲೆ
30	ಸಂಗಮ	ತುಮಕೂರು

ಆ) ಬಂದಿದೆ.

ಇ) ಕಳಪೆ ಗುಣಮಟ್ಟದ ಹಾಲನ್ನು ಉತ್ಪಾದಿಸಿ ಮಾರಾಟ ಮಾಡುತ್ತಿರುವ ಖಾಸಗಿ ಡೈರಿಗಳ ಹಾಲಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಕಳಪೆ ಗುಣಮಟ್ಟ ಎಂದು ವಿಶ್ಲೇಷಣಾ ವರದಿಯಲ್ಲಿ ಕಂಡು ಬಂದಲ್ಲಿ, ಆಹಾರ ಸುರಕ್ಷತಾ ಮತ್ತು ಗುಣಮಟ್ಟ ಕಾಯ್ದೆ–2006 ರ ಅಡಿಯಲ್ಲಿ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುವುದು.

ಪಶು ಆಸ್ಪತ್ರೆಗಳನ್ನು ಪ್ರಾರಂಭಿಸುವುದು

2 (103); ಶ್ರೀ ಐಹೋಳೆ ಡಿ. ಮಹಾಲಿಂಗಪ್ಪ (ರಾಯಭಾಗ)

ಅ) 2014–15ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಗೆ ಹೊಸ ಪಶು ಆಸ್ಪತ್ರೆಗಳನ್ನು ಪ್ರಾರಂಭಿಸಲು ಮಂಜೂರಾತಿಗಾಗಿ ಬಂದಿರುವ ಪ್ರಸ್ತಾವನೆಗಳೆಷ್ಟು ಹಾಗೂ ಮಂಜೂರಾತಿ ನೀಡಲಾಗಿರುವ ಹೊಸ ಪಶು ಆಸ್ಪತ್ರೆಗಳ ಸಂಖ್ಯೆ ಎಷ್ಟು; ಅವುಗಳಾವುವು (ವಿವರ ನೀಡುವುದು);

ಆ) ಮಂಜೂರಾಗಿರುವ ಈ ಪಶು ಆಸ್ಪತ್ರೆಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; [ಮಾಹಿತಿ ನೀಡುವುದು];

ಇ) ಈ ಪಶು ಆಸ್ಪತ್ರೆಗಳ ಕಾಮಗಾರಿಗಳು ಪೂರ್ಣಗೊಂಡಿವೆಯೇ? [ವಿವರ ನೀಡುವುದು];

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು)

ಅ) 2014–15ನೇ ಸಾಲಿನಲ್ಲಿ ಬೆಳಗಾವಿ ಜಿಲ್ಲೆಯಿಂದ, ಹೊಸದಾಗಿ ಪಶು ಚಿಕಿತ್ಸಾಲಯಗಳನ್ನು ತೆರೆಯಲು 30 ಪ್ರಸ್ತಾವನೆಗಳು ಹಾಗೂ ಪ್ರಾಥಮಿಕ